‘ನಿಮಗೊಂದು ಕಥೆ ಹೇಳಬೇಕಿದೆ’.

ಮುಂಬೈನ ಪಂಚತಾರಾ ಹೋಟೆಲ್‌ನಲ್ಲಿ ಊಟ ಮಾಡುತ್ತಲೇ ಮಾಧ್ಯಮದವರೊಂದಿಗೆ ಹರಟೆ ಹೊಡೆಯುತ್ತ ಕುಳಿತಿದ್ದ ಕ್ರೀಡಾ ವೀಕ್ಷಕ ವಿವರಣೆಗಾರ ಹಾಗೂ ನಿರೂಪಕ ಚಾರು ಶರ್ಮಾ – ‘ನಿಮಗೊಂದು ಕಥೆ ಹೇಳಬೇಕಿದೆ’ ಎಂದಾಗ ಕರ್ನಾಟಕದ ಕ್ರೀಡಾ ಪತ್ರಕರ್ತರ ಕಣ್ಣುಗಳಲ್ಲಿ ದಿಗ್ಗನೆ ಕುತೂಹಲ ಕಾಣಿಸಿಕೊಂಡಿತು.

‘ಸರ್ ಏನದು ಕಥೆ?’ – ಮಾತು ಮುಂದುವರಿಯಿತು.

‘ಒಮ್ಮೆ ಅಲ್ಲಿ ನೋಡಿ’ ಎಂದು ಚಾರು ಶರ್ಮಾ ಹೋಟೆಲ್‌ನ ವಿಶಾಲವಾದ ಆವರಣದಲ್ಲಿ ಫಿಟ್‌ನೆಸ್ ಕಸರತ್ತು ನಡೆಸುತ್ತಿದ್ದ ‘ಪ್ರೊ ಕಬಡ್ಡಿ ಲೀಗ್’ನ ಬೆಂಗಳೂರು ಬುಲ್ಸ್ ಆಟಗಾರರತ್ತ ಕೈ ತೋರಿಸಿದರು. ಆಗ ತಂಡದ ನಾಯಕರಾಗಿದ್ದ ದೆಹಲಿ ಮೂಲದ ಮಂಜೀತ್ ಚಿಲ್ಲಾರ್, ಉತ್ಕೃಷ್ಟ ಗುಣಮಟ್ಟದ ಕ್ರೀಡಾ ಶೂ–ಬಟ್ಟೆಗಳನ್ನು ಧರಿಸಿ ಸಹ ಆಟಗಾರರಿಗೆ ಮಾರ್ಗದರ್ಶನ ಮಾಡುತ್ತಿದ್ದರು. ಕ್ರಿಕೆಟ್ ಆಟಗಾರರನ್ನು ಸುತ್ತುವರಿಯುವಂತೆ ಮಂಜೀತ್ ಅವರನ್ನೂ ಸುತ್ತುವರೆದಿದ್ದ ಹೋಟೆಲ್ ಸಿಬ್ಬಂದಿ ಆಟೊಗ್ರಾಫ್ ಪಡೆಯಲು, ಸೆಲ್ಫಿ ತೆಗೆದುಕೊಳ್ಳಲು ಮುಗಿಬಿದ್ದಿದ್ದರು.

ಚಾರು ಶರ್ಮಾ, ಮಂಜೀತ್ ಅವರ ಬದಲಾದ ದೆಸೆಯ ಕಥೆ ಹೇಳಿದ್ದು 2015ರ ಜುಲೈ ತಿಂಗಳಲ್ಲಿ. ಅದಕ್ಕೂ ಒಂದು ವರ್ಷ ಮೊದಲು (2014) ಮಂಜೀತ್ ಚಿಲ್ಲಾರ್ ದೇಶದಾದ್ಯಂತ ಸುದ್ದಿಯಾಗಿದ್ದರು. ಭಾರತ ಕಬಡ್ಡಿ ತಂಡ ದಕ್ಷಿಣ ಕೊರಿಯಾದ ಇಂಚೆನ್‌ನಲ್ಲಿ ನಡೆದಿದ್ದ ಏಷ್ಯನ್ ಕ್ರೀಡಾಕೂಟದಲ್ಲಿ ಚಿನ್ನದ ಪದಕ ಗೆದ್ದಾಗ ಅವರು ತಂಡದ ಸದಸ್ಯರಾಗಿದ್ದರು. ಅದಕ್ಕೂ ಮೊದಲು ಹಲವು ಬಾರಿ ಮಂಜೀತ್ ದೇಶವನ್ನು ಪ್ರತಿನಿಧಿಸಿದ್ದರೂ ದೇಶಕ್ಕೆಲ್ಲ ಅಪರಿಚಿತರಂತೆಯೇ ಇದ್ದರು!

ಪ್ರೊ ಕಬಡ್ಡಿ ಆಟಗಾರರನ್ನು ನೋಡುತ್ತಲೇ ಮಾತು ಮುಂದುವರಿಸಿದ ಚಾರು ಶರ್ಮಾ – ‘2010ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತದ ಪುರುಷರ ಮತ್ತು ಮಹಿಳಾ ಕಬಡ್ಡಿ ತಂಡಗಳು ಚಿನ್ನದ ಪದಕ ಜಯಿಸಿದ್ದವು. ಏಷ್ಯನ್ ಕ್ರೀಡಾಕೂಟದ ಕಬಡ್ಡಿಯಲ್ಲಿ ಭಾರತ ಪಾಲ್ಗೊಳ್ಳಲು ಆರಂಭಿಸಿದ ಮೊದಲ ವರ್ಷದಿಂದ (1990) ನಿರಂತರವಾಗಿ ಕಬಡ್ಡಿಯಲ್ಲಿ ಚಿನ್ನದ ಪದಕ ಜಯಿಸಿಕೊಂಡು ಬಂದಿದೆ. ಮಹತ್ವದ ಈ ಕ್ರೀಡಾಕೂಟದಲ್ಲಿ ಭಾರತ ಮಹಿಳಾ ತಂಡ ಪಾಲ್ಗೊಂಡ ಮೊದಲ ಸಲವೇ ಚಿನ್ನದ ಪದಕ ಜಯಿಸಿತ್ತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಭಾರತ ಕ್ರಿಕೆಟ್ ಹಾಗೂ ಕಬಡ್ಡಿಯಲ್ಲಿ ಇಷ್ಟೆಲ್ಲಾ ಖ್ಯಾತಿ ಹೊಂದಿದ್ದರೂ ಕ್ರಿಕೆಟ್‌ಗೆ ಸಿಕ್ಕ ಪ್ರಾಮುಖ್ಯತೆ, ಪ್ರಚಾರ ಕಬಡ್ಡಿಗೆ ಸಿಗುತ್ತಿಲ್ಲ ಎನ್ನುವ ಕೊರಗು ಸದಾ ಕಾಡುತ್ತಲೇ ಇತ್ತು. 2010ರ ಏಷ್ಯನ್ ಕ್ರೀಡಾಕೂಟದ ವೇಳೆಯೇ ಪ್ರೊ ಕಬಡ್ಡಿ ಆರಂಭಿಸುವ ಯೋಜನೆ ಹೊಳೆಯಿತು. ಆ ಕನಸು ಈಗ ಸಾಕಾರಗೊಂಡಿದೆ. ಆಟಗಾರರು ಕ್ರಿಕೆಟಿಗರಂತೆ ತಾರಾಪಟ್ಟ ಪಡೆದುಕೊಂಡಿದ್ದಾರೆ’ ಎಂದು ತುಟಿಯಂಚಿನಲ್ಲಿ ನಗು ಅರಳಿಸಿದರು.




ಚಾರು ಶರ್ಮಾ ಅವರು ಬೆಟ್ಟು ಮಾಡಿ ತೋರಿಸಿದ್ದು ಒಂದು ಉದಾಹರಣೆಯಷ್ಟೆ. ಇಂಥ ಅನೇಕ ನಿದರ್ಶನಗಳು ನಮ್ಮ ಮುಂದಿವೆ. ಚಾರು ಶರ್ಮಾ ಪ್ರೊ ಕಬಡ್ಡಿ ಲೀಗ್ ಆರಂಭದ ಹಿಂದಿನ ಈ ಕಥೆ ಹೇಳಿದ್ದಾಗ ಮೊದಲ ಆವೃತ್ತಿ ಪೂರ್ಣಗೊಂಡಿತ್ತು. ಐಪಿಎಲ್ ಗುಂಗಿನಲ್ಲಿದ್ದ ಕ್ರಿಕೆಟ್ ಅಭಿಮಾನಿಗಳನ್ನು ದೇಶಿ ಕ್ರೀಡೆ ನಿಧಾನವಾಗಿ ತನ್ನತ್ತ ಸೆಳೆಯುತ್ತಿತ್ತು. ಎರಡನೇ ಆವೃತ್ತಿ ಆಗಷ್ಟೇ ಆರಂಭವಾಗಿತ್ತು. ಪ್ರೊ ಕಬಡ್ಡಿ ಟೂರ್ನಿಯ ನಿರ್ದೇಶಕರೂ ಆಗಿದ್ದ ಚಾರು ಶರ್ಮಾ ಹಾಗೂ ‘ಮಶಾಲ್ ಸ್ಪೋರ್ಟ್ಸ್’ನ ಸಹ ಸಂಸ್ಥಾಪಕ ಆನಂದ್ ಮಹೇಂದ್ರ ಆರಂಭಿಸಿದ ಹೊಸ ಮಾದರಿಯ ಟೂರ್ನಿ ಈಗ ದೊಡ್ಡ ಯಶಸ್ಸು ಕಂಡಿದೆ. ಆಟಗಾರರ, ಕ್ರೀಡಾ ತರಬೇತುದಾರರ ಬದುಕು ಬದಲಿಸಿದೆ. ಹೊಸ ಉದ್ಯೋಗಗಳ ಅವಕಾಶ ಸೃಷ್ಟಿಸಿದೆ.

ಕಣ್ಣು ಕೋರೈಸುವ ಬೆಳಕು, ಕೋಟ್ಯಂತರ ರೂಪಾಯಿ ಹಣ, ಮನೆ ಮನಗಳಲ್ಲಿ ದೇಶಿ ಆಟದ ಸದ್ದು, ಜೀವನದಲ್ಲಿ ಒಮ್ಮೆಯಾದರೂ ಪ್ರೊ ಕಬಡ್ಡಿ ಆಟಗಾರನಾಗಬೇಕು ಎನ್ನುವ ಕನಸು, ಮಹಾನಗರಗಳ ಪಂಚತಾರಾ ಹೋಟೆಲ್‌ಗಳಲ್ಲಿ ವಾಸ್ತವ್ಯ, ಖಾಸಗಿ ಕಂಪನಿಗಳ ಉತ್ಪನ್ನಗಳ ಜಾಹೀರಾತು ರಾಯಭಾರಿಯ ಗೌರವಗಳನ್ನು ‘ಪ್ರೊ ಕಬಡ್ಡಿ ಮಾದರಿ’ ಆಟಗಾರರಿಗೆ ತಂದುಕೊಟ್ಟಿದೆ.